ರಾಜ್ಯದಲ್ಲಿ ಹೆಚ್ಚುತ್ತಿರುವ ಮಂಗನ ಕಾಯಿಲೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1059(1118)

ಸದಸ್ಯರ ಹೆಸರು : ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ)

ಉತ್ತರಿಸುವ ಸಚಿವರು: ಡಾ॥ಎ.ಬಿ.ಮಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ಮಂಗನಕಾಯಿಲೆ ರೋಗಕ್ಕೆ ಔಷಧವನ್ನು ಪತ್ತೆಹಚ್ಚಲಾಗಿದೆಯೇ?

ಆ) ಪತ್ತೆ ಹಚ್ಚಿದ್ದಲ್ಲಿ ಯಾವ ಸಂಸ್ಥೆ ಈ ಔಷಧಿಯನ್ನು ಕಂಡು ಹಿಡಿದಿದೆ?

ಇ) ಈ ಔಷಧಿಯ ಉಪಯೋಗ, ವಿತರಣೆ, ಬಳಕೆಯ ಸೂತ್ರಗಳೇನು?

ಈ) ಈ ಔಷಧಿಯನ್ನು ರೋಗ ತಗಲುವ ಮಾನವನಿಗೆ ಬಳಸುವ ಬಗ್ಗೆ ಸರ್ಕಾರವು ಪ್ರಮಾಣೀಕರಿಸಿ (ದೃಢೀಕರಿಸಿ) ಯೋಗ್ಯವೆಂದು ಪರಿಗಣಿಸಿದೆಯೇ?

ಉ) ಪ್ರಯೋಗಾತ್ಮಕವಾಗಿ ಈಗಾಗಲೇ ಇಂತಹ ರೋಗಿಗಳಿಗೆ ಈ ಚಿಕಿತ್ಸೆ ನೀಡಿ ಫಲಕಾರಿಯಾಗಿರುವ ಅಂಶ ಗೊತ್ತಿದೆಯೇ?

ಉತ್ತರ

ಅ) ಕೆ.ಎಫ್.ಡಿ. ವೈರಸ್ ಮೂಲಕ ಮಂಗನ ಕಾಯಿಲೆ ಬರುತ್ತದೆ ಎಂದು ಪತ್ತೆ ಹಚ್ಚಲಾಗಿದೆ. ಈ ರೋಗಕ್ಕೆ ನಿರ್ದಿಷ್ಟವಾದ ಔಷಧಿ ಪತ್ತೆ ಹಚ್ಚಿರುವುದಿಲ್ಲ. ರೋಗದ ಲಕ್ಷಣಗಳನ್ನು ಆಧರಿಸಿ, ಮಂಗನ ಕಾಯಿಲೆಯನ್ನು ಉಪಶಮನ ಮಾಡಲು ಚಿಕಿತ್ಸೆ ನೀಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಪ್ರಾಣಿ ಆರೋಗ್ಯ ಮತ್ತು ಪಶು ವಿಜ್ಞಾನ ಸಂಸ್ಥೆ, ಬೆಂಗಳೂರು, ಈ ಸಂಸ್ಥೆಯು ಲಸಿಕೆಗಳನ್ನು ತಯಾರಿಸಿ ಆರೋಗ್ಯ ಇಲಾಖೆಗೆ ಸರಬರಾಜು ಮಾಡುತ್ತಿದೆ. ಇದನ್ನು ದೃಢೀಕರಿಸಿ ಯೋಗ್ಯವೆಂದು ಪರಿಗಣಿಸಿದ ನಂತರ ಕಾಯಿಲೆಗೆ ಬಳಸಲಾಗುತ್ತಿದೆ.

ಉ) ಪ್ರಯೋಗಾತ್ಮಕವಾಗಿ ಈಗಾಗಲೇ ಇಂತಹ ರೋಗಿಗಳಿಗೆ ಚಿಕಿತ್ಸೆ ನೀಡಿ ಫಲಕಾರಿಯಾಗಿರುವುದರ ಬಗ್ಗೆ ಪ್ರಗತಿ ಸಾಧನೆ ನಿರ್ದಿಷ್ಟವಾಗಿ ಹೇಳಲು ಬರುತ್ತಿಲ್ಲ. ಈ

ಕಾಯಿಲೆ ಬರದಂತೆ ಕೆ.ಎಫ್.ಡಿ. ಲಸಿಕೆಗಳನ್ನು ನೀಡಲಾಗುತ್ತಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1060(1120)

ಸದಸ್ಯರ ಹೆಸರು : ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ)

ಉತ್ತರಿಸುವ ಸಚಿವರು : ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಪ್ರಶ್ನೆ

ಅ) ವಿಶ್ವಬ್ಯಾಂಕ್ ನೆರವಿನೊಂದಿಗೆ ಶಿವಮೊಗ್ಗ ಜಿಲ್ಲೆಯಲ್ಲಿ ಅನುಷ್ಠಾನಗೊಂಡಿರುವ ಕುಡಿಯುವ ನೀರಿನ ಯೋಜನೆಗಳು ಯಾವುವು? (ಯೋಜನೆವಾರು ವಿವರಗಳನ್ನು ನೀಡುವುದು)

ಆ) ಸದರಿ ಯೋಜನೆಗಳ ಅಂದಾಜು ವೆಚ್ಚ ಎಷ್ಟು; ಎಷ್ಟು ಯೋಜನೆಗಳು ಪ್ರಾರಂಭಗೊಂಡಿವೆ; ಎಷ್ಟು ಯೋಜನೆಗಳು ಪ್ರಾರಂಭಗೊಳ್ಳಬೇಕಾಗಿದೆ?

ಇ) ಈ ಯೋಜನೆಗಳಲ್ಲಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಅವ್ಯವಹಾರಗಳಿಗೆ ಸಂಬಂಧಪಟ್ಟಂತೆ ಯಾರ ಮೇಲೆ ಕ್ರಮ ಕೈಗೊಳ್ಳಲಾಗಿದೆ?

ಉ) ತೀರ್ಥಹಳ್ಳಿ ತಾಲ್ಲೂಕಿನ ಕೋಣಂದೂರಿನ ಕುಡಿಯುವ ನೀರಿನ ಯೋಜನೆ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮ ಏನು?

ಉತ್ತರ

ಅ) ವಿಶ್ವಬ್ಯಾಂಕ್ ಯೋಜನೆಯಡಿ ಶಿವಮೊಗ್ಗ ಜಿಲ್ಲೆಯಲ್ಲಿ ಕೈಗೊಳ್ಳಲಾದ ನೀರು ಸರಬರಾಜು ಕಾಮಗಾರಿಗಳ ಯೋಜನಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ಯೋಜನೆಗಳ ಅಂದಾಜು ವೆಚ್ಚ ರೂ. 1920.40 ಲಕ್ಷಗಳು. ಈ ಯೋಜನೆಗಳ ಪರಿಷ್ಕೃತ ಅಂದಾಜು ವೆಚ್ಚ ರೂ. 2436.06 ಲಕ್ಷಗಳು. ಎಲ್ಲಾ 84